ಶ್ರೀ ಆರ್. ನಾರಾಯಣ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಖರ್ಗೆಯವರು ಸ್ಪೆಸಿಫಿಕ್ ಆಗಿ ಕೇಳುತ್ತಿದ್ದಾರೆ. ವಿರೋಧ ಪಕ್ಷದ ನಾಯಕರು ಕೇಳುತ್ತಿದ್ದಾರೆ. Interim Arrangement ಆಗಿದೆಯೇ ಅಥವಾ ಇಲ್ಲವೋ ಎಂಬುದನ್ನು ಸರ್ಕಾರದವರು ಸ್ಪಷ್ಟ ಮಾಡಬೇಕು. ಇಲ್ಲದಿದ್ದರೆ ಅಕ್ಸೆಪ್ಟ್ ಮಾಡಿಕೊಳ್ಳಬೇಕು. ಇದೇ ಈ ಸಂದರ್ಭದಲ್ಲಿ ಬಂದಿರತಕ್ಕಂಥ ಪ್ರಶ್ನೆ. ಅದನ್ನು ಬಿಟ್ಟು ಬಿ.ಜೆ.ಪಿ. ಮೆಜಾರಿಟಿ ಇತ್ಯಾದಿ, ಇತ್ಯಾದಿ ಬಗ್ಗೆ ಮಾತನಾಡಿ ವಿಷಯವನ್ನು ಬೇರೆ ಕಡೆಗೆ ಎಳೆಯ-ತಕ್ಕಂಥದ್ದು ಸರಿಯಲ್ಲ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಸರ್ಕಾರ ಈ ತರಹ ಮೋಸದಿಂದ ನೀರು ಬಿಟ್ಟಿರತಕ್ಕಂಥದ್ದು, ಕರ್ನಾಟಕ ರಾಜ್ಯಕ್ಕೆ ಅನ್ಯಾಯ ಮಾಡಿರತಕ್ಕಂಥದ್ದು ಇದರ ವಿರುದ್ಧವಾಗಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ. ಇಲ್ಲಿ ನಗುವುದು ಏನು? ನಾನು ಹೇಳಿರುವುದು ಸತ್ಯ ಇದೆ. ಹೌದು, ಕರ್ನಾಟಕಕ್ಕೆ ಅನ್ಯಾಯವಾಗಿದೆ. ಕರ್ನಾಟಕ ರಾಜ್ಯದ ಜನರಿಗೆ ಅನ್ಯಾಯ ಮಾಡುತ್ತಿದ್ದೀರಿ, ಮೋಸ ಮಾಡುತ್ತಿದ್ದೀರಿ.

ಶ್ರೀ ಕೆ.ಎನ್. ನಾಗೇಗೌಡ:- ಮಾನ್ಯ ಅಧ್ಯಕ್ಷರೆ, ವಾಟಾಳ್ ನಾಗರಾಜ್‌ರವರು ಸುಳ್ಳು ಮಾಹಿತಿಯನ್ನು ಕೊಟ್ಟಿದ್ದಾರೆಂದು ಆರೋಪ ಮಾಡುತ್ತಾ ಹೋಗುತ್ತಿದ್ದಾರೆ. ನಾವು ಕಾವೇರಿ ಜಲ ವಿವಾದದ ಬಗ್ಗೆ ಪರಿಹಾರ ಕಂಡುಹಿಡಿಯಬೇಕೆಂದು ಹೊರಟರೆ ಇವರು, ರಾಜ್ಯಕ್ಕೆ ದ್ರೋಹ ಮಾಡು-ತ್ತಿದ್ದಾರೆಂದು ಹೇಳಿದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಸರ್ಕಾರದವರು ತಮಿಳುನಾಡಿನ ಪರವಾಗಿ ಇದ್ದಾರೆ. ಕರ್ನಾಟಕ ಜನರಿಗೆ ಅನ್ಯಾಯ ಮಾಡುತ್ತಿದ್ದಾರೆ. ಇದು ಬಿಟ್ಟು ಬೇರೆ ಮಾತೇ ಇಲ್ಲ.

(ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ತಮಿಳುನಾಡಿನ ಜೊತೆ ಯಾವುದೋ ಒಂದು ಒಪ್ಪಂದಕ್ಕೆ ಈ ಸರ್ಕಾರ ಬಂದು ನಮ್ಮ ರಾಜ್ಯದ ಜನತೆಗೆ ದ್ರೋಹ ಮಾಡುತ್ತಿದ್ದಾರೆ. ನಿಮ್ಮ ಯಾವುದೋ ಒಂದು ಸ್ವಾರ್ಥಕ್ಕೋಸ್ಕರ ಕರ್ನಾಟಕದ ಜನರಿಗೆ ಅನ್ಯಾಯ ವಾಗುವುದನ್ನು ಪ್ರತಿಭಟನೆ ಮಾಡಿ ನಾವು ಸಹ ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಬಿ.ಜೆ.ಪಿ.ಯ ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ನಾವು ಕೇಳಿದ್ದು ಏನೆಂದರೆ ಇಂಟರಿಂ ಅರೇಂಜ್‌ಮೆಂಟ್ ಮಾಡಿಕೊಂಡು ಅದಕ್ಕೆ ಮುಖ್ಯಮಂತ್ರಿಗಳು ಒಪ್ಪಿಕೊಂಡಿರುವುದನ್ನು ಕೂಡ ಅವರು ಹೇಳುತ್ತಿಲ್ಲ.